**ಸಿ.ಸಿ.ನಂ.908/2025**

**ಪಿ.ಡಬ್ಲೂ-1**

ದಿನಾಂಕ: 06-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ- ಆರೋಪಿ ಪರ ಶ್ರೀ.ಬಿ.ಆರ್.ಜಿ ವಕೀಲರಿಂದ ಃ**

1. ನಾನು ಪಿ.ಯು.ಸಿ ವ್ಯಾಸಂಗ ಮಾಡಿದ್ದೇನೆ. ನಾನು ದರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಲ್ಲಿ ಸೇವಾ ಪ್ರತಿನಿಧಿಯಾಗಿ ಕರ್ತವ್ಯನಿರ್ವಹಿಸುತ್ತಿದ್ದೇನೆ. ಆರೋಪಿ ಸದರಿ ಸಂಘದಲ್ಲಿ ಸದಸ್ಯೆಯಾಗಿದ್ದು ಸುಮಾರು 5-6 ವರ್ಷಗಳಿಂದ ನನಗೆ ಪರಿಚಯ ಇರುತ್ತಾರೆ. ನಮ್ಮ ಮನೆಯಲ್ಲಿ ನನ್ನ ಗಂಡ ಮತ್ತು ಮಕ್ಕಳು ಇರುತ್ತೇವೆ. ನನ್ನ ಮತ್ತು ಆರೋಪಿ ನುಡುವೆ ರೂ.8,50,000/- ಗಳಿಗೆ ಹಣಕಾಸಿನ ವ್ಯವಹಾರ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ತಿಂಗಳಿಗೆ 15,000/- ರೂಪಾಯಿ ಕಮೀಶನ್ ರೂಪದಲ್ಲಿ ಆದಾಯ ಇದೆ ಮತ್ತು ನಮ್ಮ ಮನೆಯಲ್ಲಿ ಇನ್ನೂ 5 ಜನ ದುಡಿಯುತ್ತೇವೆ. ನನ್ನ ವಾರ್ಷಿಕ ಆದಾಯ ಗೊತ್ತಿಲ್ಲ. ನನಗೆ ಬೇರೆ ಯಾವದೇ ಆದಾಯದ ಮೂಲಗಳು ಇಲ್ಲಾ.

2. ನಾನು ಜಾಗ ಖರೀದಿಸಲು ನಮ್ಮ ಮನೆಯ ಒಟ್ಟು ಆದಾಯವನ್ನು ಸೇರಿಸಿ ಇಟ್ಟಿದ್ದು ಆರೋಪಿ ತನಗೆ ಹಣದ ಅಡಚಣೆ ಇದೆ ಎಂದು ಕೇಳಿದಾಗ ನಾನು ಒಬ್ಬಳೇ ಇದ್ದಾಗ ಸದರಿ ಹಣವನ್ನು ಆರೋಪಿಗೆ ಕೊಟ್ಟಿರುತ್ತೇನೆ. ಆರೋಪಿಗೆ ಸದರಿ ಹಣವನ್ನು ನಗದು ರೂಪದಲ್ಲಿ ನೀಡಿದ್ದೇನೆ. ಆರೋಪಿ ಏನು ಕೆಲಸ ಮಾಡುತ್ತಾರೆ ನನಗೆ ಗೊತ್ತಿಲ್ಲ. ಆರೋಪಿ 8,50,000/- ರೂಪಾಯಿಯ ವ್ಯವಹಾರ ಮಾಡುವಷ್ಟು ಸಾಮರ್ಥ್ಯ ಇಲ್ಲಾ ಎಂದರೆ ಸರಿಯಲ್ಲ. ಆರೋಪಿಗೆ 8,50,000/- ರೂಪಾಯಿ ಹಣದ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.

3. ನನ್ನ ಮತ್ತು ಆರೋಪಿ ನಡುವೆ ಕೈಗಡ ಪತ್ರ ವ್ಯಹಾರ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿ ಮಧ್ಯೆ ರೂ.1,95,000/- ಕೈಗಡ ಪತ್ರ ವ್ಯವಹಾರ ಆಗಿತ್ತು ಎಂದರೆ ಸರಿಯಲ್ಲ. ನಾನು ಆರೋಪಿಗೆ ಫೋನ ಮೂಲಕ ಸದರಿ ಕೈಗಡ ಪತ್ರದ ಹಣವನ್ನು ಕೊಡುವಂತೆ ಕೇಳಿದ್ದೇನು ಮತ್ತು ಒಂದುವೇಳೆ ಸದರಿ ಹಣ ನೀಡಿದರೆ ನಾನು ಈ ದೂರನ್ನು ಹಿಂಪಡೆಯುತ್ತೇನೆ ಎಂದು ಹೇಳಿದ್ದೆ ಎಂದರೆ

ಸರಿಯಲ್ಲ.  ಒಂದು ತಿಂಗಳ ಹಿಂದೆ ನಾನು ಮತ್ತು ಆರೋಪಿ ರಾಜಿ ಪಂಚಾಯತಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಪಂಚಾಯತಿ ವೇಳೆಯಲ್ಲಿ ಆರೋಪಿ ತಾನು ರೂ.1,95,000/- ಹಣ ಕೊಡುವುದಾಗಿ ಹೇಳಿ ಈ ದೂರು ಹಿಂಪಡೆಯುವಂತೆ ಕೇಳಿಕೊಂಡಿದ್ದರು ಎಂದರೆ ಸರಿಯಲ್ಲ. ಫೇಬ್ರುವರಿ 2022 ರಲ್ಲಿ ಆರೋಪಿ ನನಗೆ ಚೆಕ್ಕನ್ನು ಸಹಿ ಮಾಡಿ, ಮೊತ್ತ ನಮೂದಿಸಿ, ದಿನಾಂಕ ನಮೂದಿಸಿ ನೀಡಿದ್ದರು.ಆರೋಪಿ ಅವಿದ್ಯಾವಂತಳಾಗಿದ್ದು ಬರೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಕೈಗಡ ಪತ್ರದ ಭದ್ರತೆಗಾಗಿ ಖಾಲಿ ಚೆಕ್ಕನ್ನು ಸಹಿ ಮಾಡಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ಚೆಕ್ಕನಲ್ಲಿ ನನ್ನ ಪೂರ್ಣ ಹೆಸರು ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಜಮಖಂಡಿ